ಜಿಲ್ಲಾಧಿಕಾರಿಗಳಿಗನುಗುಣವಾಗಿ ಕುಂಠಿತವಾಗಿದೆ. ಅದನ್ನು ಪರಿಶೀಲನೆ ಮಾಡಿ ಹೆಚ್ಚು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಪರಿಶೀಲಿಸುತ್ತೇನೆ.

ಅಧ್ಯಕ್ಷರು : ನೀವು ಖಚಿತವಾದ ಆರೋಪವಿದ್ದರೆ ಕಳುಹಿಸಿಕೊಡಿ ಅವರು ಅಲ್ಲಿ ಜಿಲ್ಲಾಧಿಕಾರಿಗಳಿಗೆ ಹೇಳುತ್ತಾರೆ.

ಶ್ರೀ ಎ. ಟಿ. ರಾಮಸ್ವಾಮಿ : ಕಡ್ಡಾಯ ಶಿಕ್ಷಣ ನೀತಿ ಜಾರಿಯಲ್ಲಿದೆಯೇ? ಎಷ್ಟು ವರ್ಷಗಳಿಂದ ಇದೆ? ಅದು ಇದ್ದ ಮೇಲೆ ವಯಸ್ಕರಿಗೆ ಶಿಕ್ಷಣ ಕೊಡತಕ್ಕ ಅವಶ್ಯಕತೆಯಿದೆಯೇ? ಅದೇ ಹಣವನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಸುಧಾರಣೆ, ಉತ್ತಮಪಡಿಸಲಿಕ್ಕೆ ಖರ್ಚು ಮಾಡಿದರೆ ಅನುಕೂಲವಾಗುವುದಿಲ್ಲವೇ?

ಶ್ರೀ ಆರ್. ಕೃಷ್ಣಪ್ಪ : ಸನ್ಮಾನ್ಯ ಅಧ್ಯಕ್ಷರೆ, ಆ ಇಲಾಖೆಯಲ್ಲಿ 14ರಿಂದ 35 ವರ್ಷದ ಯುವಕರಿಗೆ ಹೇಳಿಕೊಡುವಂಥಾದ್ದು, ವಿದ್ಯಾಭ್ಯಾಸ ಕೊಡುವಂಥಾದ್ದು. ಯಾರು ಡ್ರಾಪ್‌ಔಟ್ ಆಗಿರುತ್ತಾರೋ, ಅಂಥವರಿಗೆ ವಿದ್ಯಾಭ್ಯಾಸ ಕೊಡುವಂಥಾದ್ದು. ಅದಕ್ಕೂ ಮಿಗಿಲಾಗಿ, 50,60 ವರ್ಷ ಆಗಿದ್ದರೂ ಅಲ್ಲಿ ಸೇರಿಕೊಂಡಾಗ ಅವರಿಗೂ ಕೂಡ ವಿದ್ಯಾಭ್ಯಾಸ ಕೊಡುವಂಥಾದ್ದು. ಇದು ಪರಿಪೂರ್ಣ ವಿದ್ಯಾಭ್ಯಾಸ ಕೊಡಬೇಕೆನ್ನುವ ಭಾವನೆ ಮೇಲೆ ಇರುವಂಥ ಕಾರ್ಯಕ್ರಮ. ಅದು ತಪ್ಪಿ ಹೋಗಿರುವವರಿಗೆ ಕೊಡುವಂಥ ವ್ಯವಸ್ಥೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಕಲಿತು ಕೊಳ್ಳುವವನಿಗೆ ಖರ್ಚಾಗುವಂಥಾದ್ದು 60-70 ರೂಪಾಯಿಗಳು ಮಾತ್ರವೇ ಹೊರತು, ಪ್ರೈಮರಿ ಶಾಲೆಯ ಒಬ್ಬ ವಿದ್ಯಾರ್ಥಿಗೆ 2 ಸಾವಿರ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ. ಇದರಲ್ಲಿ 60-70 ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದರಿಂದ, ಇದರಲ್ಲಿ ಅಕ್ಷರಸ್ಥನಾದರೆ, ಈ ರಾಜ್ಯಕ್ಕೆ ಉತ್ತಮವಾದ ಒಬ್ಬ ಪ್ರಜೆಯಾಗಿ ರಾಜ್ಯದ ಭವಿಷ್ಯ ತಿಳಿದುಕೊಳ್ಳುವಂಥ ಪ್ರವೃತ್ತಿ ಅವನಿಗೆ ಬರುತ್ತದೆ ಎನ್ನುವುದರ ಬಗ್ಗೆ ಇದನ್ನು ಅನುಷ್ಠಾನಗೊಳಿಸಿದ್ದು. ಅದನ್ನು ಮುಂದುವರಿಸಿಕೊಂಡು ಹೋಗುವ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಉತ್ತರ ಸಮಾಧಾನಕರವಾಗಿದೆ.

ವಿಷಯ : ಮೈಸೂರು ನಗರ ಸಿದ್ಧಾರ್ಥ ಹಾಗೂ ವಿಜಯನಗರ ಬಡಾವಣೆಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭ.

224 (1726)-ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದ ಸಿದ್ಧಾರ್ಥ ಬಡಾವಣೆಯಲ್ಲಿ ಹಾಗೂ ವಿಜಯನಗರ ಬಡಾವಣೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಬೇಕೆಂದು ಕೋರಿಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ 1997-98ನೇ ಸಾಲಿನಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅನುಕೂಲವಾಗುವಂತೆ ಸದರಿ ಕಾಲೇಜುಗಳನ್ನು ಪ್ರಾರಂಭಿಸಲಾಗುವುದೇ ?

ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು.)

ಆ) 1995-96ನೇ ಸಾಲಿನಲ್ಲಿ ಸಿದ್ಧಾರ್ಥ ಬಡವಾಣೆಗೆ ಸಂಬಂಧಿಸಿದಂತೆ ಕೋರಿಕೆ ಬಂದಿತು.

ಆ) ಇಲ್ಲ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಹೇಗಿದೆಯೆಂದರೆ, ಹಳ್ಳಿಯಲ್ಲಿ ಹೌದಪ್ಪನ ಚಾವಡೀಲಿ ಹೌದಪ್ಪ, ಇಲ್ಲಪ್ಪನ ಚಾವಡೀಲಿ ಇಲ್ಲಪ್ಪ ಎನ್ನುವ ರೀತಿ ಇದೆ. ಮಾನ್ಯ ಅರ್ಥ ಸಚಿವರು ಮುಂದಿನ ಶೈಕ್ಷಣಿಕ ವರ್ಷದಿಂದ ಇನ್ನೊ ಒಂದು ಕಾಲೇಜನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸಿದ್ಧಾರ್ಥ ಲೈ ಔಟ್‌ನಲ್ಲಿ ಕಾಲೇಜಿಗೆ ಕೋರಿಕೆ ಬಂದಿದೆಯೆಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ರಾಜ್ಯದಲ್ಲಿ ಶಿಕ್ಷಣವನ್ನು ಅತ್ಯುನ್ನತ ಮಟ್ಟಕ್ಕೆ ತರಬೇಕೆನ್ನುತಕ್ಕ ಕಾಳಜಿ ಹೊಂದಿರತಕ್ಕ ಶ್ರೀ ಎಚ್. ಜಿ. ಗೋವಿಂದೇಗೌಡರು, ಶ್ರೀ ಬಿ. ಸೋಮಶೇಖರರವರು ಮತ್ತು ಕರ್ನಾಟಕ ಸರ್ಕಾರ ಇವತ್ತು ಏನು ಈ ಶಿಕ್ಷಣದ ಕೊಲೆ ಮಾಡಲಿಕ್ಕೆ ಹೊರಟಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಾರಣವೇನೆಂದರೆ, ಒಂದೊಂದು ಕಾಲೇಜಿನಲ್ಲಿ 3 ಸಾವಿರ, 4 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಮಹಾರಾಣಿ ಕಾಲೇಜು ಯುವರಾಜ ಕಾಲೇಜು, ಮಹಾರಾಣಿ ಸೈನ್ಸ್ ಕಾಲೇಜು, ಮಹಾರಾಜ ಕಾಲೇಜುಗಳು, ಈ ನಾಲ್ಕೇ ಕಾಲೇಜುಗಳು ಇದ್ದವು. ಒಂದು ಹೊಸ ಕಾಲೇಜನ್ನು ಕಳಿದ ವರ್ಷ ಕೊಟ್ಟಿದ್ದಾರೆ ಮತ್ತು ಇನ್ನೂ ಕೂಡ 10 ಸಾವಿರ ವಿದ್ಯಾರ್ಥಿಗಳಿಗೆ ಸ್ಥಳಾವಕಾಶಕ್ಕೆ ಪರದಾಡುವಂತಹ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು : ಶಂಕರಲಿಂಗೇಗೌಡರೆ, ದಯಮಾಡಿ ತಾವು ಪ್ರಶ್ನೆ ಕೇಳಿದಿರಿ, ಅದಕ್ಕೆ ಸರ್ಕಾರದಿಂದ ಉತ್ತರಿಸಿದ್ದಾರೆ. ಸಿದ್ಧಾರ್ಥ ಬಡಾವಣೆಯಲ್ಲಿ ಕಾಲೇಜು ಪ್ರಾರಂಭ ಮಾಡುವುದಕ್ಕೆ ಕೋರಿಕೆ ಬಂದಿತ್ತು. ಈಗ ಆ ಉದ್ದೇಶ ನಮ್ಮ ಮುಂದೆ ಇಲ್ಲ ಎಂದು ಹೇಳಿದ್ದಾರೆ. ಅಲ್ಲಿ ಹೆಚ್ಚಿನ ಅಗತ್ಯವಿದೆ ಮಾಡಬೇಕು ಎಂದು ಹೇಳಿದಿರಿ. ಮತ್ತೆ ನಿರ್ಬಂಧವಿದೆ. ತಾವು ಆಡಳಿತ ಭಾಷೆ ಕನ್ನಡದಲ್ಲೇ ಮಾಡನಾಡಬೇಕು, ಬೇರೆ ಯಾವುದೋ ಭಾಷೆಯಲ್ಲಿ ಮಾತನಾಡುತ್ತಿದ್ದೀರಿ. ನಾವು ಅದನ್ನು ಒಪ್ಪುವುದಿಲ್ಲ. ನಾವು ಕನ್ನಡದಲ್ಲಿಯೇ ವ್ಯವಹರಿಸಬೇಕು.

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ : ಕನ್ನಡವನ್ನು ಅಚ್ಚುಕಟ್ಟಾಗಿ ಕನ್ನಡದ ಕಂಪು ಇಂಪು ತಂಪು ಎಂದು ಕುವೆಂಪುರವರು ಆ ಕಾಲದಲ್ಲಿ ಹೇಳಿದ್ದಾರೆ. ಅಂತಹ ಕಂಪಿನ ಕನ್ನಡವನ್ನು ನೀವು ಕನ್ನಡ ಸರಿಯಿಲ್ಲವೆಂದು ಹೇಳಿದರೆ, ನಾವು ಇನ್ಯಾವ ರೀತಿ ಹೇಳಬೇಕು ಅಧ್ಯಕ್ಷರೇ? ಈಗ ನನ್ನ ಒಂದು ಕೋರಿಕೆ ಏನೆಂದರೆ, ಇನ್ನೊಂದು ಕಾಲೇಜುನ್ನು ಮುಂದಿನ ವರ್ಷ ಪ್ರಾರಂಭ ಮಾಡುವುದಕ್ಕೆ ಸರ್ಕಾರದಿಂದ ಸಾಧ್ಯವಿದೆಯೇ ಎಂಬುದು.

ಅಧ್ಯಕ್ಷರು : ಪ್ರಥಮ ದರ್ಜೆ ಕಾಲೇಜು ಎಂದು ಹೇಳಿದ್ದಾರೆ. ಪ್ರಥಮ ದರ್ಜೆ ಕಾಲೇಜೆಂದರೆ, ಹೈಯರ ಎಜುಕೇಷನ. ತಾವೇ ಉತ್ತರ ಕೊಡಬೇಕು.

ಶ್ರೀ . ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೆ, ಆ ಸಿದ್ದಾರ್ಥ ಬಡವಾಣೆ ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಕಳೆದ ವರ್ಷ, ಸಿದ್ದಾರ್ಥ ಬಡಾವಣೆಯಲ್ಲಿರತಕ್ಕ ವಸಂತ ಮಹಲ್ ಎನ್ನುವ ಸ್ಥಳಕ್ಕೆ ಕಾಲೇಜು ಇನ್ನೇನು ಕೊಡಬೇಕೆನ್ನುವ ಪರಿಸ್ಥಿತಿಯಲ್ಲಿ, ಆ ಸ್ಥಳವನ್ನು ಬದಲಾವಣೆ ಮಾಡಿ, ಬೇರೆ ಸ್ಥಳಕ್ಕೆ ವರ್ಗಾಯಿಸಲಾಯಿತು. ಸನ್ಮಾನ್ಯ ಸಚಿವರಿಗೂ ಸಹ ಆ ವಿಚಾರ ಗೊತ್ತಿದೆ. ಮತ್ತೆ, ಮಾನ್ಯ ಉಪ ಮುಖ್ಯಮಂತ್ರಿಗಳು ಈ ವರ್ಷ ಕೊಡುತ್ತೇವೆಂದು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಸರ್ಕಾರ ಈ ವಿಚಾರದಲ್ಲಿ ಏನು ಆಲೋಚನೆ ಮಾಡಿದೆ?

ಶ್ರೀ ಬಿ. ಸೋಮಶೇಖರ್ : ನಮ್ಮ ರಾಜ್ಯದಲ್ಲಿ ಸುಮಾರು 150 ಸರ್ಕರಿ ಕಾಲೇಜುಗಳಿವೆ. ಸುಮಾರು 295 ಖಾಸಗಿ ಕಾಲೇಜುಗಳಿವೆ. ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಕಾಲೇಜುಗಳೆಲ್ಲ ಖಾಸಗಿ ಕಾಲೇಜುಗಳು. ಸರ್ಕಾರಿ ಕಾಲೇಜುಗಳು ಹೆಚ್ಚಾಗಿ ನಮ್ಮ ಹಳೆಯ ಮೈಸೂರಿನಲ್ಲಿ ಇರತಕ್ಕದ್ದು. ಈ ಬಗ್ಗೆ ಒಂದು ಸರ್ವೆ ಮಾಡಿ ಮ್ಯಾಪಿಂಗ್ ಮಾಡತಕ್ಕ ಪ್ರಯತ್ನಮಾಡಿದ್ದೇನೆ. ಮೊದಲು ತಾಲ್ಲೂಕು ಮಟ್ಟದಲ್ಲಿ ಒಂದೊಂದು ಕಾಲೇಜುಗಳು ಇರಬೇಕೆಂಬುದು ಒಂದು, ಮತ್ತು ಹೆಚ್ಚು ಸರ್ಕಾರಿ ಕಾಲೇಜನ್ನು ಪ್ರಾರಂಭ ಮಾಡಬೇಕಾದರೆ ಸರ್ಕಾರದ ವತಿಯಿಂದ ಕನಿಷ್ಟ ಪಕ್ಷ 50 ಲಕ್ಷ ರೂಪಾಯಿ ಬೇಕಾಗುತ್ತದೆ. ಆದರಿಂದ ಸರ್ಕಾರಕ್ಕೆ ಹಣದ ಹೊರೆ ಜಾಸ್ತಿ ಆಗುತ್ತಿದೆ. ಇತಿಮಿತಿ ನೋಡಿ ಎಲ್ಲೆಲ್ಲಿ ಅವಶ್ಯಕತೆ ಬಿದ್ದಿದೆ ಅದನ್ನು ಮತ್ತೆ ಸರ್ಕಾರ ಪರಿಶೀಲಿಸುತ್ತದೆ. ಆದರೆ ಅಷ್ಟು ಧಾರಾಳವಾಗಿ ಕೊಡುವುದಕ್ಕೆ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಸಾಕಾಗುತ್ತಿಲ್ಲ.

ಅಧ್ಯಕ್ಷರು : ಇದನ್ನು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಹಣ ಕೊಟ್ಟಿಲ್ಲವೆಂದೂ ಇವರೂ ಹೇಳುತ್ತಾರೆ, ಹಣ ಕೊಟ್ಟಿಲ್ಲವೆಂದು ಅವರೂ ಹೇಳುತ್ತಾರೆ. ಅಂದಾಗ ನಾವು ಯಾವುದನ್ನು ಒಪ್ಪುವುದು?

(ಗೊಂದಲ)

ಅಧ್ಯಕ್ಷರು : ಇಲ್ಲ ಅನ್ನುವ ಸ್ಥಿತಿಯಿಂದ ಪುನಃ ಪರಿಶೀಲಿಸುತ್ತೇವೆಂದು ಒಂದು ಹೆಜ್ಜೆ ಹಿಂದಕ್ಕೆ ಬಂದಿದ್ದಾರೆ. ಸರ್ಕಾರದ ಮನ ಒಲಿಸೋಣ. ತಾವು ದಯಮಾಡಿ ಸಹಕರಿಸಿ ಅನಂತರ ಹೇಳಿ. ಅವರು ಪುನಃ ಪರಿಶೀಲನೆ ಮಾಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಆದ್ದುದರಿಂದ ನಾವು ಒಪ್ಪಿಸೋಣ.

ಅಧ್ಯಕ್ಷರು ವಿರೂಪಾಕ್ಷಪ್ಪನವರೇ, ತಮ್ಮ ಪ್ರಶ್ನೆ 1834 ಸರ್ಕಾರದವರು ಒಂದು ವಾರ ಸಮಯ ಕೇಳಿದ್ದಾರೆ. ವಿಷಯ ಸಮಿತಿ ವರಿದಿ ಬಂದಮೇಲೆ ಮತ್ತೆ ನಾವು ಮೇ ತಿಂಗಳಲ್ಲಿ ಸೇರುತ್ತೇವೆ. ಆಗ ಉತ್ತರ ಕೊಡಿಸೋಣ.

ಶ್ರೀ ಕೆ. ವಿರೂಪಾಕ್ಷಪ್ಪ : ನನ್ನ ಯಾವ ಪ್ರಶ್ನೆಗೂ ಉತ್ತರ ದೊರಕುತ್ತಿಲ್ಲ.

ಅಧ್ಯಕ್ಷರು : ನಾನು ಮುನಿಸಿಪಾಲಿಟಿ ಕಟ್ಟಡಗಳದ್ದು, ಎಪಿಎಂಸಿ. ಯದ್ದು ಎಲ್ಲಾ ಕೊಡಿಸಿದ್ದೇನೆ.

ಶ್ರೀ ಕೆ. ವಿರೂಪಾಕ್ಷಪ್ಪ : ಅದು ಒಂದು ಬಿಟ್ಟರೆ ಉಳಿದ ಯಾವ ಪ್ರಶ್ನೆಗಳಿಗೂ ಉತ್ತರ ದೊರಕಿಲ್ಲ. 5-6 ಚುಕ್ಕೆ ಗುರುತಿನ ಪ್ರಶ್ನೆಗಳಿವೆ. ಅವುಗಳಲ್ಲಿ ಒಂದಕ್ಕೂ ಉತ್ತರ ಬಂದಿಲ್ಲ.

ಅಧ್ಯಕ್ಷರು : ಮೇ ತಿಂಗಳಲ್ಲಿ ತರಿಸಿಕೊಡುತ್ತೇನೆ.

ವಿಷಯ : ನಗರಗಳಲ್ಲಿರುವ ಕಾನ್ವೆಂಟ್ ಶಾಲೆಗಳು ಮೀಸಲಾತಿ ನಿಯಮ ಪಾಲಿಸದೇ ಇರುವುದು.

222 (1765)-ಶ್ರೀ ಹೆಚ್. ಡಿ. ಬಸವರಾಜ್ (ವೀರಾಜಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನಗರಗಳಲ್ಲಿರುವ ಅನುದಾನಿತ ಮತ್ತು ಅನುದಾನರಹಿತ ಕಾನ್ವೆಂಟ ಶಾಲೆಗಳಿಗೆ ಸರ್ಕಾರ ಮನ್ನಣೆ ನೀಡಿದ್ದು ಈ ಶಾಲೆಗಳಲ್ಲಿ ಮೀಸಲಾತಿ ಅನ್ವಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ದಾಖಲಾತಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಸರ್ಕಾರದ ಮೀಸಲಾತಿ ನಿಯಮ ಪಾಲಿಸದೆ ಶಾಲೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಿದೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)